ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ನಾಡಿದ್ದು ತೆಗೆದುಕೊಳ್ಳೋಣ, ಅಷ್ಟರಲ್ಲಿ ನಾನು ವಿವರಗಳನ್ನು ಕಲೆಕ್ಟ್ ಮಾಡುತ್ತೇನೆ.

ಅಧ್ಯಕ್ಷರು : ಆಗಬಹುದು.

ಪ್ರಶ್ನೆ ಸಂಖ್ಯೆ : 51(164)

ಶ್ರೀ ಎಂ.ಪಿ. ಕೇಶವಮೂರ್ತಿ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಸ್ವಲ್ಪ ಕಾಲಾವಕಾಶ ಬೇಕು. 31ನೇ ತಾರೀಖು ತೆಗೆದುಕೊಂಡರೆ ಪೂರ್ಣ ಉತ್ತರ ತರಿಸಿ ಕೊಡುತ್ತೇನೆ.

ಅಧ್ಯಕ್ಷರು : ಆಗಬಹುದು.

ಸವಣೂರು ತಾಲ್ಲೂಕು ಕುಣಿಮೇಳ್ಳಿಹಳ್ಳಿ ಏತ ನೀರಾವರಿ ಯೋಜನೆ

591 - ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವಣೂರು ತಾಲ್ಲೂಕು ಕುಣಿಮೇಳ್ಳಿ ಹಳ್ಳಿ ಏತ ನೀರಾವರಿ ಬ್ಯಾರೇಜ್ ಕೆಲಸ ಎಂದು ಪ್ರಾರಂಭವಾಯಿತು? ಅದು ಯಾವ ಹಂತದಲ್ಲಿದೆ?

ಆ) ಸದರಿ ಕೆಲಸ ಎಷ್ಟು ದಿನಗಳಲ್ಲಿ ಮುಗಿಸಲಾಗುವುದು?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಸವಣೂರು ತಾಲ್ಲೂಕು ಕುಣಿಮೇನ ಹಳ್ಳಿ ಬ್ಯಾರೇಜ್ ಕೆಲಸವು 7-1-86 ರಲ್ಲಿ 18.10 ಲಕ್ಷ ರೂ.ಗಳ ಅಂದಾಜಿಗೆ ಅನುಮೋದನೆ ನೀಡಲಾಗಿದೆ. ದಿನಾಂಕ : 30-3-88 ರಂದು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ, ಬೆಂಗಳೂರು ಇವರಿಗೆ ಜಿಲ್ಲಾ ಪರಿಷತ್ ಧಾರವಾಡ ಇವರು ವಹಿಸಿಕೊಟ್ಟದ್ದು ಮಾರ್ಚ್ 1989ರಲ್ಲಿ ಡಿ.ಪಿ.ಎ.ಪಿ ಯೋಜನೆಯಡಿಯಲ್ಲಿ ಕೆಲಸ ಪ್ರಾರಂಭವಾಯಿತು. ಬ್ಯಾರೇಜಿನ ತಳಪಾಯದ ಕಾಂಕ್ರೀಟ್ ಮತ್ತು ಒಂದು ಬದಿಯ ಅಬಟಮೆಂಟ ಭಾಗವನ್ನು ನಿರ್ವಹಿಸಲಾಗಿದೆ. ಸುಮಾರು 21.59 ಲಕ್ಷ ರೂ.ಗಳ ಕೆಲಸವನ್ನು ನಿರ್ವಹಿಸಲಾಗಿದೆ. ಬ್ಯಾರೇಜನ ಗೇಟಿನ ಕಾಮಗಾರಿಗಳನ್ನು ಕೈಗೊಂಡಿದ್ದು ಒಟ್ಟು 30.00 ಲಕ್ಷ ರೂ.ಗಳ ಮೊತ್ತವನ್ನು ನಿಗಮಕ್ಕೆ ಪಾವತಿ ಮಾಡಬೇಕಾಗಿದೆ. 94-95ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಗಾರಿಗೆ 1.00 ಲಕ್ಷ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

ಆ) ಸದರಿ ಕಾಮಗಾರಿಯು 53.00 ಲಕ್ಷ ರೂ.ಗಳಿಗೆ ಪರಿಷ್ಕೃತ ಅಂದಾಜು ಪರಿಶೀಲನೆಯಲ್ಲಿದ್ದು ಪರಿಷ್ಕೃತ ಅಂದಾಜಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಆದ್ಯತೆ ಮೇಲೆ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಮಂಜುನಾಥ ಸಿ. ಕುನ್ನೂರು : ಮಾನ್ಯ ಅಧ್ಯಕ್ಷರೇ, ಮಾನ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಈ ಬ್ಯಾರೇಜನ್ನು 1989ನೇ ಇಸವಿಯಲ್ಲಿ ಡಿ ಪಿ ಎ ಪಿ ಯೋಜನೆಯಡಿಯಲ್ಲಿ ಕೆಲಸ ಪ್ರಾರಂಭಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಅರ್ಧಂಬರ್ಧ ಕೆಲಸ ಮಾಡಿ ಈಗ ಕೆಲಸವನ್ನು ನಿಲ್ಲಿಸಿದ್ದಾರೆ. ಮಾನ್ಯ ಮಂತ್ರಿಗಳು ಏನು ಉತ್ತರದಲ್ಲಿ ಕೊಟ್ಟಿದ್ದಾರೆ ಅದು ವಸ್ತು ಸ್ಥಿತಿ ನಿಜ. ಮತ್ತೆ ಮುಂದೆ ತಾವು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ 30 ಲಕ್ಷ ರೂಪಾಯಿಗಳು ನೀವು ಕೊಡಬೇಕೆನ್ನುವ ಮಾತನ್ನು ಹೇಳಿದ್ದೀರಿ. ಅದೂ ಸತ್ಯ. ತಾವು ಬಾಕಿ ಕೊಡಬೇಕಾದ ಹಣವನ್ನು ಯಾವಾಗ ಕೊಡುತ್ತೀರಿ? ಮತ್ತು ಕೆಲಸ ಪ್ರಾರಂಭ ಮಾಡಬೇಕಾದರೆ ಬಾಕಿ ಹಣ ಪಾವತಿ ಮಾಡದೇ ಕೆಲಸ ಪ್ರಾರಂಭವಾಗುವುದಿಲ್ಲ. ಎರಡನೆಯದಾಗಿ, ಇದರ ಪರಿಷ್ಕೃತ ಅಂದಾಜು 53 ಲಕ್ಷ ರೂಪಾಯಿಗಳು ಎಂದು ಮಾಡಿದ್ದೀರಿ. ಇದಕ್ಕೆ

ಸರ್ಕಾರದ ಅನುಮತಿ ದೊರೆಯಬೇಕು ಎನ್ನುವ ಮಾತನ್ನು ಸಹ ತಾವು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಅನುಮತಿ ಯಾವಾಗ ದೊರಕಿಸಿಕೊಳ್ಳುತ್ತೀರಿ? ಮತ್ತೊಂದು 1994-95ನೇ ಸಾಲಿನಲ್ಲಿ ತಾವು 1 ಲಕ್ಷ ರೂಪಾಯಿ ಅನುದಾನವನ್ನು ಒದಗಿಸಿದ್ದೀರಿ. 53 ಲಕ್ಷ ರೂಪಾಯಿಗಳ ಯೋಜನೆಗೆ 1 ಲಕ್ಷ ರೂಪಾಯಿ ಅನುದಾನ ಒದಗಿಸಿದರೆ ಏನೂ ಕೆಲಸಆಗುವುದಿಲ್ಲ. ಇದನ್ನು ನೋಡಿದರೆ ಸರ್ಕಾರ ಈ ಕೆಲಸವನ್ನು ಪೂರ್ಣಗೊಳಿಸಬೇಕೆನ್ನುವ ಇಚ್ಛೆ ಇದೆ ಎನ್ನುವಂತಾಗುವುದಿಲ್ಲ. ದಯಮಾಡಿ ಈ ಬ್ಯಾರೇಜ್ ಕೆಲಸ ಮಾಡಿದರೆ 4-6 ತಾಲ್ಲೂಕುಗಳಿಗೆ ಉಪಯೋಗವಾಗುತ್ತದೆ. ಆದ್ದರಿಂದ ಸರ್ಕಾರ ತ್ವರಿತಗತಿಯಲ್ಲಿ ಜನಗಳಿಗೆ ಉಪಯೋಗವಾಗುವಂತಹ ಈ ಕೆಲಸವನ್ನು ಪೂರ್ಣ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಮತ್ತು ಪರಿಷ್ಕೃತ ಅಂದಾಜು 53 ಲಕ್ಷ ರೂಪಾಯಿಗಳ ಹಣವನ್ನು ಸರ್ಕಾರ ಯಾವಾಗ ಬಿಡುಗಡೆ ಮಾಡುತ್ತದೆ ಎನ್ನುವ ಮಾತನ್ನು ನಿಖರವಾಗಿ ಹೇಳಬೇಕು.

ಶ್ರೀ ಎಂ.ಪಿ. ಕೇಶವಮೂರ್ತಿ : ಮಾನ್ಯ ಅಧ್ಯಕ್ಷರೇ, ಈ ಒಂದು ಯೋಜನೆಯನ್ನು 1986ನೇ ಇಸವಿ ಜನವರಿ ತಿಂಗಳಲ್ಲಿ ಪ್ರಾರಂಭ ಮಾಡಿದ್ದು 14 ಲಕ್ಷ 10 ಸಾವಿರ ರೂಪಾಯಿಗಳನ್ನು ಈ ಯೋಜನೆಯಡಿಯಲ್ಲಿ ಒದಗಿಸಿಕೊಟ್ಟು ಜಿಲ್ಲಾಪರಿಷತ್ತು ವತಿಯಿಂದ ಕಾಮಗಾರಿ ಪ್ರಾರಂಭವಾಗಿದ್ದು, ತದನಂತರ ಇದನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ಇವರಿಗೆ ವಹಿಸಿಕೊಟ್ಟು 1988ನೇ ಇಸವಿಯಲ್ಲಿ ಕೆಲಸ ಪ್ರಾರಂಭವಾಗಿದೆ. ಈಗಾಗಲೇ ಇದಕ್ಕೆ 9.79 ಲಕ್ಷ ರೂಪಾಯಿಗಳ ಹಣವನ್ನು ಖರ್ಚು ಮಾಡಿದೆ. ಆದರೆ 1988-89ನೇ ಸಾಲಿನ ಬಡ್ಜೆಟ್‌ನಲ್ಲಿ ಈ ಯೋಜನೆಯನ್ನು ಸೇರಿಸಿಲ್ಲ. ಆ ಕಾರಣದಿಂದ ಜಿಲ್ಲಾ ಪರಿಷತ್ ಈ ಕಾಮಗಾರಿಯನ್ನು ನಿಲ್ಲಿಸಿದರು. ಆದಾದ ನಂತರ ನಾವು ವರ್ಗಾವಣೆ ಮಾಡಿದ್ದೇವೆ. ಈಗ ನಾವು 30 ಲಕ್ಷ ರೂಪಾಯಿಗಳ ಬಾಕಿ ಕೊಡಬೇಕಾಗಿದೆ. 94-95ನೇ ಸಾಲಿನಲ್ಲಿ ಆಯವ್ಯಯದಲ್ಲಿ ಇದಕ್ಕೆ 1ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಇನ್ನು ಇದಕ್ಕೆ 53 ಲಕ್ಷ ರೂಪಾಯಿಗಳು ಬೇಕಾಗಿದೆ. ಈಗ ಆಡಳಿತಾತ್ಮಕ ಮಂಜೂರಾತಿ ಮಂಜೂರಾತಿ ಈ ವಿಷಯದಲ್ಲಿ ಕೊಟ್ಟು ಆದ್ಯತೆ ಮೇರೆಗೆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಆರಾಧನಾ ಯೋಜನೆ

541 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *1993-94ನೇ ಸಾಲಿನಲ್ಲಿನ ಆರಾಧನಾ ಯೋಜನೆಯಡಿಯಲ್ಲಿ ಹೊಳೆ ನರಸೀಪುರ ತಾಲ್ಲೂಕಿಗೆ ಮುಜರಾಯಿ ದೇವಸ್ಥಾನಗಳಿಗಾಗಿ ಬಿಡುಗಡೆಯಾದ ಹಣವೆಷ್ಟು?*

ಆ) *1993-94ನೇ ಸಾಲಿನಲ್ಲಿ ಯಾವ ಯಾವ ಮುಜರಾಯಿ ದೇವಸ್ಥಾನಗಳಿಗೆ ಈ ಯೋಜನೆಯಡಿಯಲ್ಲಿ ಹಣವನ್ನು ನೀಡಲಾಗಿದೆ?*

ಇ) *1994-95ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಹಣವೆಷ್ಟು?*

ಈ) *ಅವುಗಳ ಪೈಕಿ ಹೊಳೆನರಸೀಪುರ ತಾಲ್ಲೂಕಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?*

ಉ) *ಎಲ್ಲಾ ತಾಲ್ಲೂಕುಗಳಿಗೂ ಒಂದೇ ಪ್ರಮಾಣದಲ್ಲಿ ಹಣವನ್ನು ಬಿಡುಗಡೆ ಮಾಡಲಾಗುವುದೇ?*

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಮುಜರಾಯಿ ಸಚಿವರು) :